<u>**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**</u>

<u>**ಶಹಾಪೂರ**</u>

CW 11

<u>ಸಿ.ಸಿ. ನಂ.291 /2016</u>

ಹೆಸರು ಃ ನಬಿಲಾಲ್

ತಂದೆ ಹೆಸರು ಃ ಹುಸೇನ ಸಾಬ್

ವಯಸ್ಸು ಃ 63 ವರ್ಷ

ಉದ್ಯೋಗ ಃ ನಿವೃತ್ತ PSI

ವಾಸ ಃ ಶಹಾಪೂರ

<u>**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 07-08-2025**</u>

<u>**ಮುಖ್ಯ ವಿಚಾರಣೆ ಃ ದಂಡ ಪ್ರಕ್ರಿಯೇ ಸಂಹಿತೆ ಕಲಂ 299 ರ ಅಡಿಯಲ್ಲಿ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**</u>

ನಾನು 2017 ರಿಂದ 2021 ರ ವರೆಗೆ ಶಹಾಪೂರ ಪೊಲೀಸ ಠಾಣೆಯಲ್ಲಿ ASI ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಮಾನ್ಯ ನ್ಯಾಯಾಲಯದಿಂದ ಆರೋಪಿತರ ಪತ್ಯೆಗಾಗಿ ಹೊರಡಿಸಿರುವ ಪ್ರೊಕ್ಲೊಮೇಷನ್ ಜಾರಿಯಾಗ್ದಿರಿಂದ ದಿಃ 09-07-2020 ರಂದು ಅದನ್ನು ಪಡೆದು ಪ್ರಕಟಿಸುವುದಕ್ಕಾಗಿ ಅದೇ ದಿನ ಭೀರಗಟ್ ಜನತಾ ಕಾಲೋನಿ ಗ್ರಾಮಕ್ಕೆ ಹೋಗಿ ಅಲ್ಲಿ ಎರಡು ಜನ ಪಂಚರ ಸಮಕ್ಷಮ ಡಂಗುರವನ್ನು ಸಾರಿ, ಗ್ರಾಮ ಪಂಚಾಯತ್ ಇವರಿಗೆ ವಿಚಾರವನ್ನು ತಿಳಿಸಿ ಪ್ರತಿಯನ್ನು ಪಂಚಾಯತಿಯ ಚಾವಡಿಯ ಮೇಲಿನ ಗೋಡೆಗೆ ಹಾಗೂ 2 ನೇ ಪ್ರತಿಯನ್ನು ಭೀರಗಟ್ ಜನತಾ ಕಾಲೋನಿ ನ ಸಾರ್ವಜನಿಕ ಬಸ್ ನಿಲ್ದಾಣಗಳ ಗೊಡೆಗಳಲ್ಲಿ ಹಾಗೂ ಮೂರನೇ ಪ್ರತಿಯನ್ನು ವೀರಗೊಟ್ಟ ದೇವರ ಗುಡಿಯ ಗೊಡೆಗೆ ಅಂಟಿಸಿರುತ್ತೇನೆ. ಅದರ ಬಗ್ಗೆ ವಿವರಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಆ ಬಗ್ಗೆ ಒಂದು ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿರುತ್ತೇನೆ. ಪ್ರೊಕ್ಲೊಮೇಷನ್‌ನ್ನು ನ್ನು ಜಾರಿ ಮಾಡಿದ ಪಂಚನಾಮೆಯನ್ನು ನಿಪಿ.9 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.